**ದಿನಾಂಕಃ 03.03.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: 1 ಮತ್ತು 2 ನೇ ಎದುರುದಾರರ ಪರ ವಕೀಲರಿಂದಃ**

1. ಮೈಸೂರು ಕೊಳ್ಳೆಗಾಲ ಎನ್ ಎಚ್ ರಸ್ತೆಯಲ್ಲಿ ಅಪಘಾತ ಸಂಭವಿಸಿತ್ತು ಎಂದರೆ ಸರಿ. ರಸ್ತೆ ದಾಟುವಾಗ ಅಪಘಾತ ಆಗಿರುತ್ತದೆ ಎಂದರೆ ರಸ್ತೆಯಲ್ಲಿ ನಡೆದುಕೊಂಡು ಹೋಗುವಾಗ ಅಪಘಾತ ಆಗಿತ್ತು. ಎನ್ ಎನ್ ರಸ್ತೆಯ ಪಕ್ಕದಲ್ಲಿ ಪುಟ್ಪಾತ್ ಇದೆ ಎಂದರೆ ಸರಿ. ತಾರ್ ರಸ್ತೆಯಲ್ಲಿ ನನ್ನ ತಂದೆ ನನ್ನನ್ನು ಕರೆದುಕೊಂಡು ಹೋಗುತ್ತಿದ್ದರು ಎಂದರೆ ಸರಿ. ನನ್ನ ತಂದೆ ವಯಸ್ಸು ತೋರಿಸುವ ದಾಖಲೆ ಹಾಜರುಪಡಿಸಿದ್ದೇನೆ. ಅಪಘಾತ ಪಡಿಸಿದ ವಾಹನ ಮಾಲಿಕರು ಮತ್ತು ಚಾಲಕ ಯಾರು ಎಂದು ಗೊತ್ತಿಲ್ಲ. ಸದರಿ ಅರ್ಜಿಯನ್ನು ರಾಮನಗರ ಅಥವಾ ಮೈಸೂರು ನ್ಯಾಯಾಲಯದಲ್ಲಿ ಹಾಕಬೇಕಿತ್ತು, ಈ ನ್ಯಾಯಾಲಯದ ವ್ಯಾಪ್ತಿಗೆ ಬರುವುದಿಲ್ಲ ಎಂದರೆ ಅವರಿಗೆ ಗೊತ್ತಾಗುವುದಿಲ್ಲ ಹೀಗಾಗಿ ನಾನು ಅರ್ಜಿ ಸಲ್ಲಿಸಿದ್ದೇನೆ. ವಾಹನ ಮಾರಾಟ ಆದ ಬಗ್ಗೆ ನನಗೆ ಮಾಹಿತಿ ಇಲ್ಲ. ಈಗಾಗಲೇ 2 ನೇ ಎದುರುದಾರ ವಾಹನವನ್ನು ಮಾರಾಟ ಮಾಡಿರುವುದರಿಂದ ಅನಾವಶ್ಯಕವಾಗಿ ಸದರಿಯವರನ್ನು ಪಾಟಿಯನ್ನಾಗಿ ಮಾಡಿದ್ದೇನೆಂದರೆ ಸರಿಯಲ್ಲ. ನನ್ನ ತಂದೆಗೆ ಓಡಾಡಲು ಆಗುತ್ತಿರಲಿಲ್ಲ, ಸದರಿಯವರ ತಪ್ಪಿನಿಂದಲೇ ಅಪಘಾತ ಆಗಿರುವುದರಿಂದ ಯಾವುದೇ ಪರಿಹಾರಕ್ಕೆ ಅರ್ಹರಲ್ಲ ಎಂದರೆ ಸರಿಯಲ್ಲ.

2. ನನ್ನ ತಂದೆ ಜೋಳ ಬೆಳೆಯುತ್ತಿ ದ್ದರು. ಹಸು ಸಾಕಣೆ ಮಾಡುತ್ತಿದ್ದರು. ಸದರಿ ಜಮೀನಿನ ಬಗೆ ಹಾಗೂ ಆದಾಯದ ಬಗ್ಗೆ ದಾಖಲೆ ಹಾಜರುಪಡಿಸಿದ್ದೇನೆ. ನನ್ನ ತಾಯಿ ಕೂಡ ನನ್ನ ತಂದೆಗೆ ಸಹಕರಿಸುತ್ತಿದ್ದರು ಎಂದರೆ ಸರಿ. ಈಗ ಅವರು ವ್ಯವಸಾಯ ಹಾಗೂ ಹೈನುಗಾರಿಕೆ ಮಾಡುತ್ತಾರೆ ಎಂದರೆ ವಯಸ್ಸಾಗಿರುವುದರಿಂದ ಆಗುವುದಿಲ್ಲ.

ನನ್ನ ತಂದೆಗೆ ಯಾವುದೇ ಆದಾಯದ ಮೂಲ ಇರಲಿಲ್ಲ, ವ್ಯವಸಾಯ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಅಪಘಾತ ಸಮಯದಲ್ಲಿ ಕತ್ತಲಿತ್ತು ಎಂದರೆ ಸರಿ. ನನ್ನ ತಂದೆಯೇ ವಾಹನಕ್ಕೆ ಡಿಕ್ಕಿ ಮಾಡಿಕೊಂಡು ಅವರ ತಪ್ಪಿ ನಿಂದ ಅಪಘಾತ ಆಗಿರುತ್ತದೆ ಎಂದರೆ ಸರಿಯಲ್ಲ. ದ್ವಿಚಕ್ರವಾಹನದ ತಪ್ಪು ಇರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತ 1 ನೇ ಎದುರುದಾರರ ತಪ್ಪಿ ನಿಂದ ಆಗಿಲ್ಲ ಹೀಗಾಗಿ ಪರಿಹಾರ ಧನ ಕೊಡಲು 1 ನೇ ಎದುರುದಾರರು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ. ಕೇವಲ ಪರಿಹಾರ ಧನ ಪಡೆದುಕೊಳ್ಳುವ ಸಲುವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ದೊಡ್ಡಬಳ್ಳಾಪುರ**